

ನಾಲೆಗಳ ಪರಿಶೀಲನೆ ನಡೆಸಿದ ಶಾಸಕ ಸಾರಾ

ರಾಜ್ಯ ಕಾಗದ ಮತ್ತು ಲೆಕ್ಕಪತ್ರ ಸಮಿತಿಯ ಸದಸ್ಯರೂ ಭಾಗಿ

ಕೆ.ಆರ್.ನಗರ,ಸೆ.೧೨–ಕರ್ನಾಟಕ ರಾಜ್ಯ ಕಾಗದ ಮತ್ತು ಲೆಕ್ಕಪತ್ರ ಸಮಿತಿಯ ಅಧ್ಯಕ್ಷ ಹಾಗೂ ಶಾಸಕ ಸಾ.ರಾ.ಮಹೇಶ್ ಮತ್ತು ಸದಸ್ಯರು ಕೆ.ಆರ್.ನಗರ ತಾಲ್ಲೂಕಿನಲ್ಲಿ ನೀರಾವರಿ ಇಲಾಖೆಯಿಂದ ನಡೆದಿರುವ ನಾಲೆಗಳ ಕಾಮಗಾರಿಗಳ ಗುಣಮಟ್ಟ ಪರಿಶೀಲನೆ ನಡೆಸಿದರು.

ರೈತರು ತಮ್ಮಗಳ ಜಮೀನಿಗೆ ತೆರಳಲು ನಾಲೆಗೆ ಹೊಂದಿಕೊಂಡಿರುವ ರಸ್ತೆಯನ್ನು ಅನುವು ಮಾಡಿಕೊಡಿ, ನಾಲೆಗಳ ಆಧುನೀಕರಣ ಮಾಡಿರುವ ಕಡೆ ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಲು ನಿರ್ದೇಶನ ನೀಡಿ, ಇಲ್ಲದಿದ್ದರೆ ಗುತ್ತಿಗೆದಾರನ ಬಿಲ್ಲನ್ನು ತಡೆ ಹಿಡಿಯಿರಿ ಎಂದು ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕರು, ೨೦೧೭–೧೮ನೇ ಸಾಲಿನ ಲೆಕ್ಕಪತ್ರವನ್ನು ರಾಜ್ಯ ನೀರಾವರಿ ಇಲಾಖೆ ಇದುವರೆಗೂ ಸಲ್ಲಿಸದೇ ಇರುವ ಕಾರಣ ನಮ್ಮ ಸಮಿತಿಯು ಮಂಗಳವಾರ ಮೈಸೂರಿನ ಕಾಡಾ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆದಿದ್ದು, ಇದರ ಸಂಪೂರ್ಣ ವರದಿಯನ್ನು ಸರ್ಕಾರಕ್ಕೆ ನೀಡಲಾಗುವುದು ಎಂದರು.

ಇಲಾಖೆಯ ರಾಜ್ಯಮಟ್ಟದ ಮುಖ್ಯ ಅಧಿಕಾರಿಗಳು ಪಾಲ್ಗೊಂಡಿದ್ದ ಕಾರಣ ತಾಲ್ಲೂಕಿಗೆ ಭೇಟಿ ನೀಡಿ ಇಲ್ಲಿನ ಅಧಿಕಾರಿಗಳಿಂದ ಹಾಗೂ ಕೆಲವು ಕಾಮಗಾರಿಯನ್ನು ಮಾಡಿರುವ ಗುತ್ತಿಗೆದಾರರಿಂದ ಮಾಹಿತಿ ಪಡೆಯಲಾಗಿದೆ ಎಂದು ಅವರು ಹೇಳಿದರು.

ನಂತರ ತಂಡವು ಚುಂಚನಕಟ್ಟೆ ಭಾಗದ ನಾಲೆಗಳನ್ನು ಪರಿಶೀಲಿಸಿತು. ಕೆ.ಆರ್.ನಗರದ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿದ ತಂಡದ ಸದಸ್ಯರು ಮೈಸೂರಿಗೆ ಹಿಂತಿರುಗಿದರು.

ರಾಜ್ಯ ಕಾಗದ ಮತ್ತು ಲೆಕ್ಕಪತ್ರ ಸಮಿತಿಯ ಸದಸ್ಯರಾದ ಚಿಂತಾಮಣಿ ಶಾಸಕ ಕೃಷ್ಣರೆಡ್ಡಿ, ಹೊನ್ನಾಳಿ ಶಾಸಕ ಶಾಂತನ ಗೌಡರು, ಚಂದ್ರಶೇಖರ್, ಎ.ವಿ.ಪ್ರಕಾಶ್, ಎಇಗಳಾದ ಜಗನ್ನಾಥ್, ರೋಹಿತ್, ಶಂಕರೇಗೌಡ, ಕಿರಣ್, ಎಂಡಿಸಿಸಿ ಬ್ಯಾಂಕ್ ಹಾಗೂ ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ತಾಲ್ಲೂಕು ಜಾ.ದಳ ಅಧ್ಯಕ್ಷ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಮಿರ್ಲೆ ಧನಂಜಯ, ಶಾಸಕರ ಆಪ್ತ ಸಹಾಯಕ ಅರುಣ್, ಅಂಗರಕ್ಷಕ ಗೋಪಾಲ್, ಸೋಮು, ಪೊಲೀಸ್ ಸಿಬ್ಬಂದಿ ಪ್ರದೀಪ್, ಗುತ್ತಿಗೆದಾರ ರವಿಕುಮಾರ್ ಮತ್ತಿತರರು ಹಾಜರಿದ್ದರು.

ರಾಜ್ಯ ಕಾಗದ ಮತ್ತು ಲೆಕ್ಕಪತ್ರ ಸಮಿತಿಯ ಸದಸ್ಯರು ಕೆ.ಆರ್.ನಗರ ತಾಲ್ಲೂಕಿನ ರೈತರೊಂದಿಗೆ ಸಂವಾದ ನಡೆಸಿ, ಅಹವಾಲು ಸ್ವೀಕರಿಸಿದರು.

ಕೆ.ಆರ್.ನಗರ ತಾಲ್ಲೂಕು ಮಿರ್ಲೆ ಶ್ರೇಣಿಯ ನಾಲೆಯ ಭಾಗದಲ್ಲಿ ಬರುವ ಕೊಲ್ಲಿಯ ಬಳಿ ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಕಾಮಗಾರಿಯ ನಿರ್ವಹಣೆಯ ಬಗ್ಗೆ ಶಾಸಕ ಸಾ.ರಾ. ಮಹೇಶ್ ಸೂಚನೆ ನೀಡಿದರು.

ನಾಲೆಗೆ ನೀರು ಬಿಡದಿದ್ದರೆ ಹೋರಾಟ: ಶಿವಣ್ಣ ಎಚ್ಚರಿಕೆ

ತಿ.ನರಸೀಪುರದಲ್ಲಿ ನಡೆದ ಪತ್ರಿಕಾಗೋಷ್ಠಿ

ತಿ.ನರಸೀಪುರ ಪಟ್ಟಣದ ಕಬಿನಿ ಅತಿಥಿಗೃಹದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಮಾತನಾಡಿದರು. ರೈತ ಮೋರ್ಚಾ ಜಿಲ್ಲಾಧ್ಯಕ್ಷ ಪ್ರಸನ್ನ ಎನ್.ಗೌಡ, ಜಿಪಂ ಸದಸ್ಯ ಸದಾನಂದ, ಮಾಜಿ ಸದಸ್ಯ ಪುಟ್ಟಬಸವಯ್ಯ, ಕ್ಷೇತ್ರಾಧ್ಯಕ್ಷ ಶಿವಯ್ಯ, ಎಚ್.ಎಂ.ಪರಶಿವಮೂರ್ತಿ ಮತ್ತಿತರರು ಚಿತ್ರದಲ್ಲಿದ್ದಾರೆ.

ತಿ.ನರಸೀಪುರ,ಸೆ.೧೨– ಕಬಿನಿ ನಾಲಾ ಅಚ್ಚುಕಟ್ಟು ಭಾಗದ ರೈತರಿಗಾಗಿ ನಾಲೆಗಳಿಗೆ ನೀರು ಪೂರೈಕೆ ಮಾಡಲು ಸೆ.೧೫ರವರೆಗೆ ಗಡುವು ನೀಡುತ್ತಿದ್ದು, ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳದಿದ್ದಲ್ಲಿ ಪಕ್ಷದಿಂದ ಹೋರಾಟ ರೂಪಿಸುವುದಾಗಿ ಬಿಜೆಪಿ ಜಿಲ್ಲಾಧ್ಯಕ್ಷ ಕೋಟೆ ಎಂ.ಶಿವಣ್ಣ ಎಚ್ಚರಿಕೆ ನೀಡಿದರು.

ಪಟ್ಟಣದ ಕಬಿನಿ ಅತಿಥಿಗೃಹದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಇತ್ತೀಚೆಗೆ ಮಳೆ ಬೀಳುತ್ತಿದ್ದು, ಕಬಿನಿ ಜಲಾಶಯದಲ್ಲಿ ನೀರಿದ್ದರೂ ಕೂಡ ಸರ್ಕಾರ ರೈತರ ಉಳಿವಿಗಾಗಿ ನಾಲೆಗಳಿಗೆ ನೀರು ಹರಿಸಲು ಈವರೆಗೂ ಕ್ರಮ ಕೈಗೊಂಡಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳು ಈ ಜಿಲ್ಲೆಯವರಾಗಿದ್ದರೂ ರೈತರ ಅಭಿವೃದ್ಧಿಯ ಚಿಂತನೆಯ ಬಗ್ಗೆ ಚರ್ಚಿಸದೇ ನೀರಾವರಿ ಸಲಹಾ ಸಮಿತಿ ಸಭೆ ಕೂಡ ಕರೆದಿಲ್ಲ ಎಂದು ಆರೋಪಿಸಿದರು.

ಸರ್ಕಾರ ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವರ ಕಾಳಜಿಯಿಂದಾಗಿ ಕೆಆರ್‌ಎಸ್‌ನಿಂದ ಆ ಭಾಗದ ನಾಲೆಗಳಿಗೆ ಅರೆ ನೀರು ಪೂರೈಕೆಗೆ ಕ್ರಮ ಕೈಗೊಂಡಿದೆ. ಆದರೆ, ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರು ಜಲಾಶಯ ಭರ್ತಿಯಾಗಿದ್ದರೂ ಈವರೆವಿಗೂ ಕ್ರಮ ಕೈಗೊಂಡಿಲ್ಲ. ಜಲಾಶಯಗಳಿಂದ ತಮಿಳುನಾಡಿಗೆ ನೀರು ಬಿಟ್ಟು ಅವರ ಹಿತ ಕಾಪಾಡುವ ನಮ್ಮ ಸರ್ಕಾರ ನಮ್ಮ ಕಬಿನಿ ನಾಲಾ ರೈತರ ಬದುಕಿಗೆ ಪೂರಕವಾದ ಕ್ರಮ ಕೈಗೊಂಡಿಲ್ಲ. ಸರ್ಕಾರ ನಾಲೆಗಳಿಗೆ ನೀರು ಪೂರೈಸುವ ವೈಜ್ಞಾನಿಕ ಚಿಂತನೆ ಮಾಡದೆ ರೈತರಿಗೆ ಯಾವ ಬೆಳೆ ಬೆಳೆಯಬೇಕು ಎಂಬಿತ್ಯಾದಿ ಅಗತ್ಯ ಮಾಹಿತಿ ನೀಡುವಲ್ಲಿ ವಿಫಲವಾಗಿದೆ ಎಂದು ದೂರಿದರು.

ಬಿಜೆಪಿ ರೈತ ಮೋರ್ಚಾದ ಜಿಲ್ಲಾಧ್ಯಕ್ಷ ಪ್ರಸನ್ನ ಎನ್.ಗೌಡ, ಜಿಪಂ ಸದಸ್ಯ ಸದಾನಂದ ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ರೈತ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ರಮೇಶ, ಕಾರ್ಯಕಾರಿಣಿ ಸದಸ್ಯ ತೋಟದಪ್ಪ ಬಸವರಾಜು, ಜಿ.ಪಂ ಮಾಜಿ ಸದಸ್ಯ ಪುಟ್ಟಬಸವಯ್ಯ, ತಾ.ಪಂ ಸದಸ್ಯ ಎಂ.ರಮೇಶ್, ವರುಣ ಕ್ಷೇತ್ರಾಧ್ಯಕ್ಷ ಶಿವಯ್ಯ, ನರಸೀಪುರ ಕ್ಷೇತ್ರಾಧ್ಯಕ್ಷ ಎಚ್.ಎಂ.ಪರಶಿವಮೂರ್ತಿ, ರಾಜ್ಯ ಸಮಿತಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಹಿಂದುಳಿದ ವರ್ಗಗಳ ಮೋರ್ಚಾ ಜಿಲ್ಲಾಧ್ಯಕ್ಷ ವೆಂಕಟರಮಣಶೆಟ್ಟಿ, ಎಸ್‌ಟಿ ಮೋರ್ಚಾದ ಜಿಲ್ಲಾ ಕಾರ್ಯದರ್ಶಿ ಆಲಗೂಡು ರಂಗನಾಯಕ್, ಶಕ್ತಿ ಕೇಂದ್ರದ ಅಧ್ಯಕ್ಷರಾದ ಬಿ.ವೀರಭದ್ರಪ್ಪ, ಎಲ್.ಮಂಜುನಾಥ್, ಯುವ ಮೋರ್ಚಾದ ಅಧ್ಯಕ್ಷ ಮಣಿಕಂಠ ರಾಜ್‌ಗೌಡ, ಮುಖಂಡರಾದ ನಾಗರಾಜು(ತಾತ), ಬಿ.ಮಹೇಶ, ಸೋಸಲೆ ಮಂಜು, ದಿಲೀಪ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಪರ್ಯಾಯ ಇಂಧನ ಬಳಕೆಗೆ ಕರೆ

ಕೆ.ಆರ್.ನಗರ ತಾಲ್ಲೂಕಿನಲ್ಲಿ ನಡೆದ ಮಹಿಳೆಯರಿಗೆ ಅರಿವು ಕಾರ್ಯಕ್ರಮ

ಕೆ.ಆರ್.ನಗರ,ಸೆ.೧೨– ಪರ್ಯಾಯ ಇಂಧನಗಳನ್ನು ಬಳಸಿ ಪರಿಸರವನ್ನು ರಕ್ಷಿಸುವಂತಾಗಬೇಕೆಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲ್ಲೂಕು ಯೋಜನಾಧಿಕಾರಿ ಗಾಯತ್ರಿ ಕರೆ ನೀಡಿದರು.

ತಾಲ್ಲೂಕಿನ ದೇವಿತಂದ್ರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಯೋಜನೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಜ್ಞಾನವಿಕಾಸ ಕೇಂದ್ರದ ಮಹಿಳೆಯರಿಗೆ ಆರೋಗ್ಯ, ಸ್ವಚ್ಛತೆ, ಮೂಢನಂಬಿಕೆ ವಿರುದ್ಧ ಜಾಗೃತಿ ಮತ್ತು ಕೌಟುಂಬಿಕ ಸಾಮರಸ್ಯದ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಗೋಬರ್ ಗ್ಯಾಸ್ ಉತ್ಪಾದನೆಗೆ ಪ್ರೋತ್ಸಾಹ, ಕುಕ್ ಸ್ಟೌ ಹಾಗೂ ಸೋಲಾರ್ ವ್ಯವಸ್ಥೆ ಅಳವಡಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ದೇವಿತಂದ್ರೆ ಗ್ರಾಮದಲ್ಲಿ ೩೦ ಕುಟುಂಬಗಳಲ್ಲಿ ಸೆಲ್ಕೊ ಸೋಲಾರ್ ವ್ಯವಸ್ಥೆ ಅಳವಡಿಸಿಕೊಡಲಾಗಿದೆ. ಈ ಸಂಬಂಧ ಒಟ್ಟು ೫೦ ಕುಟುಂಬಗಳಿಗೆ ಅನುದಾನ ವಿತರಣೆ ಮಾಡಲಾಗಿದೆ ಎಂದು ಹೇಳಿದರು.

ಕೆ.ಆರ್.ನಗರ ತಾಲ್ಲೂಕಿನ ದೇವಿತಂದ್ರೆ ಗ್ರಾಮದಲ್ಲಿ ನಡೆದ ಜ್ಞಾನವಿಕಾಸ ಕೇಂದ್ರದ ಮಹಿಳೆಯರಿಗೆ ಅರಿವು ಕಾರ್ಯಕ್ರಮದಲ್ಲಿ ತಾಲ್ಲೂಕು ಯೋಜನಾಧಿಕಾರಿ ಗಾಯತ್ರಿ ಸೆಲ್ಕೊ ಸೋಲಾರ್ ವ್ಯವಸ್ಥೆ ಅಳವಡಿಕೆಗೆ ಆಯ್ಕೆಯಾದ ಫಲಾನುಭವಿಗಳಿಗೆ ಅನುದಾನದ ಚೆಕ್‌ಗಳನ್ನು ನೀಡಿದರು.

> ದೇವಿತಂದ್ರೆ ಗ್ರಾಮದಲ್ಲಿ ಪ್ರತಿಯೊಂದು ಕುಟುಂಬವೂ ಶೌಚಾಲಯಗಳನ್ನು ನಿರ್ಮಿಸಿಕೊಳ್ಳುವ ಮೂಲಕ ಗ್ರಾಮವು ಸ್ವಚ್ಛ ಗ್ರಾಮವಾಗಿ ಘೋಷಣೆಯಾಗಲು ಸಹಕರಿಸುವಂತಾಗಬೇಕು.
>
> -**ವೀಣಾ,** ಸದಸ್ಯರು, ತಾಪಂ.

ಶಿಕ್ಷಕ ಸೋಮಶೇಖರ್ ಮಾತನಾಡಿ, ಗ್ರಾಮಗಳಲ್ಲಿ ಮೂಢನಂಬಿಕೆಗಳಿಗೆ ಅನೇಕರು ಬಲಿಯಾಗುತ್ತಿದ್ದಾರೆ. ಪ್ರತಿಯೊಂದೂ ವಿಚಾರವನ್ನು ವೈಜ್ಞಾನಿಕವಾಗಿ ತಿಳಿದುಕೊಳ್ಳಬೇಕು ಎಂದು ಹೇಳಿದರು. ತಾಪಂ ಸದಸ್ಯೆ ವೀಣಾ ಮಾತನಾಡಿದರು. ದೇವಿತಂದ್ರೆ ಗ್ರಾಪಂ ಅಧ್ಯಕ್ಷೆ ರಾಣಿ, ಜ್ಞಾನವಿಕಾಸ ಸಮನ್ವಯಾಧಿಕಾರಿ ಗೀತಾ, ಸೇವಾ ಪ್ರತಿನಿಧಿ ಕೀರ್ತನ ಪಾರ್ವತಮ್ಮ ಮತ್ತಿತರರು ಹಾಜರಿದ್ದರು.

ಹೈರಿಗೆ ಗ್ರಾಮಕ್ಕೆ ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷರ ಭೇಟಿ

ಎಚ್.ಡಿ.ಕೋಟೆ ತಾಲ್ಲೂಕಿನ ಹೈರಿಗೆ ಗ್ರಾಮದ ಸಿದ್ದಪ್ಪಾಜಿ ದೇವಸ್ಥಾನಕ್ಕೆ ತಾಲ್ಲೂಕು ವಿಶ್ವಕರ್ಮ ಸಮಾಜ, ಕರ್ನಾಟಕ ರಾಜ್ಯ ವಿಶ್ವಕರ್ಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎನ್.ನಂದಕುಮಾರ್ ಭೇಟಿ ನೀಡಿದ್ದರು. ಎಚ್.ಡಿ.ಕೋಟೆ ಪುರಸಭೆ ಅಧ್ಯಕ್ಷೆ ಮಂಜುಳಾ ಗೋವಿಂದಾಚಾರಿ, ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಬಡಗಲಪುರ ವೆಂಕಟೇಶ್, ವರ್ತಕರ ಮಂಡಳಿ ಅಧ್ಯಕ್ಷರು, ತಾಲ್ಲೂಕು ಸಮಾಜದ ಗೌರವ ಸಲಹೆಗಾರ ಜಿ.ರವಿ, ಗೌರವ ಅಧ್ಯಕ್ಷ ಗೋವಿಂದಾಚಾರ್, ಕಾರ್ಯಾಧ್ಯಕ್ಷ ಮೂರ್ತಾಚಾರ್, ಸಹಕಾರ ಬ್ಯಾಂಕ್ ಅಧ್ಯಕ್ಷ ಸೋಮಾಚಾರ್, ಸಮಾಜದ ಪ್ರಮುಖರು ಹಾಜರಿದ್ದರು. ಈ ಸಂದರ್ಭದಲ್ಲಿ ಹೈರಿಗೆ ಗ್ರಾಮದ ವಿಶ್ವಕರ್ಮ ಸಮಾಜದ ಹಿರಿಯರನ್ನು ನಂದಕುಮಾರ್ ಅವರು ಸನ್ಮಾನಿಸಿದರು.

ಅಧೀಕ್ಷಕರಿಂದ ಕಾರ್ಮಿಕ ವಿರೋಧಿ ನೀತಿ ಆರೋಪ

ತಂಬಾಕು ಮಾರುಕಟ್ಟೆಗೆ ಕಾರ್ಮಿಕರ ಮುತ್ತಿಗೆ

ಎಚ್.ಡಿ.ಕೋಟೆ ತಾಲ್ಲೂಕಿನ ಶಾಂತಿಪುರದ ತಂಬಾಕು ಮಂಡಳಿ ಹರಾಜು ಅಧೀಕ್ಷಕರು ಕಾರ್ಮಿಕ ವಿರೋಧಿ ನೀತಿ ಅನುಸರಿಸಿದ್ದಾರೆ ಎಂದು ಆರೋಪಿಸಿ ಕಾರ್ಮಿಕರು ತಂಬಾಕು ಮಾರುಕಟ್ಟೆಗೆ ಸೋಮವಾರ ಮುತ್ತಿಗೆ ಹಾಕಿದರು.

ಎಚ್.ಡಿ.ಕೋಟೆ,ಸೆ.೧೨– ತಂಬಾಕು ಮಂಡಳಿ ಹರಾಜು ಅಧೀಕ್ಷಕರು ಕಾರ್ಮಿಕ ವಿರೋಧಿ ನೀತಿ ಅನುಸರಿಸಿದ್ದಾರೆ ಎಂದು ಆರೋಪಿಸಿ ಕಾರ್ಮಿಕರು ತಂಬಾಕು ಮಾರುಕಟ್ಟೆಗೆ ಸೋಮವಾರ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ತಾಲ್ಲೂಕಿನ ಶಾಂತಿಪುರ ಗ್ರಾಮದಲ್ಲಿರುವ ತಂಬಾಕು ಹರಾಜು ಮಾರುಕಟ್ಟೆ ೧ ಮತ್ತು ೬ರಲ್ಲಿ ಕೆಲಸ ಮಾಡಲು ಟೆಂಡರ್ ಪಡೆದಿರುವ ಕಾರ್ಮಿಕರನ್ನು ಬಿಟ್ಟು ಹೊರಗಡೆಯಿಂದ ಕೂಲಿ ಕಾರ್ಮಿಕರನ್ನು ಕರೆಯಿಸಿ ಕೆಲಸ ಮಾಡಲು ಮುಂದಾದ ಅಧೀಕ್ಷಕ ಪಿ.ಕೆ.ವೀರಭದ್ರಯ್ಯ ಅವರನ್ನು ಪ್ರಶ್ನಿಸಿದ ಮುಖಂಡರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ, ಪೊಲೀಸರಿಗೆ ದೂರು ನೀಡುವ ಬೆದರಿಕೆ ಹಾಕಿದ್ದಾರೆ ಎಂದು ಕಾರ್ಮಿಕರು ಆರೋಪಿಸಿದರು.

೩೫ ವರ್ಷಗಳಿಂದ ತಂಬಾಕು ಮಾರುಕಟ್ಟೆಯಲ್ಲಿ ಟೆಂಡರ್ ಪಡೆದುಕೊಂಡು ಕೂಲಿ ಕೆಲಸ ಮಾಡಿಕೊಂಡು ಬರುತ್ತಿರುವ ಕಾರ್ಮಿಕರನ್ನು ಹೊರಹಾಕಬೇಕೆಂಬ ಉದ್ದೇಶದಿಂದ ಹರಾಜು ಅಧೀಕ್ಷಕರು ತಮಗೆ ಬೇಕಾದವರನ್ನು ಕರೆಯಿಸಿ ಕೆಲಸ ಮಾಡಲು ಅವಕಾಶ ನೀಡಲು ಮುಂದಾಗಿದ್ದಾರೆ. ಈ ಬಗ್ಗೆ ಪ್ರಶ್ನೆ ಮಾಡಿದರೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಕಾರ್ಮಿಕರಿಗೆ ಒಂದಲ್ಲಾ ಒಂದು ಕಾರಣಕ್ಕೆ ಕಿರುಕುಳ ನೀಡುತ್ತಾ ಬಂದಿದ್ದಾರೆ. ಇಂತಹ ಕಾರ್ಮಿಕ ವಿರೋಧಿ ಅಧಿಕಾರಿ ನಮಗೆ ಬೇಡ. ಕೂಡಲೇ ವರ್ಗಾವಣೆ ಮಾಡಬೇಕೆಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ಮಾತಿನ ಚಕಮಕಿ: ಈ ವೇಳೆ ಕಾರ್ಮಿಕರು ಹಾಗೂ ಅಧೀಕ್ಷಕ ಪಿ.ಕೆ.ವೀರಭದ್ರಯ್ಯ ನಡುವೆ ಕೆಲಕಾಲ ಮಾತಿನ ಚಕಮಕಿ ನಡೆದು ಪರಿಸ್ಥಿತಿ ವಿಕೋಪಕ್ಕೆ ತಿರುಗಿತ್ತು. ಕೂಡಲೇ ಕಾರಿನಿಂದ ಇಳಿದ ಅಧೀಕ್ಷಕರು ರೈತರ ಬೈಕ್ ಹಿಡಿದು ಪೊಲೀಸ್ ಠಾಣೆಗೆ ತೆರಳಿ ಕೆಲವರ ವಿರುದ್ಧ ದೂರು ನೀಡಲು ಮುಂದಾದರು.

ಈ ವೇಳೆ ಮಧ್ಯ ಪ್ರವೇಶಿಸಿದ ಜಿಪಂ ಸದಸ್ಯ ನರಸೀಪುರ ರವಿ, ಗ್ರಾಪಂ ಸದಸ್ಯ ಶಿವಮೂರ್ತಿ, ಜಾ.ದಳ ಮುಖಂಡ ಯೋಗಾನರಸಿಂಹೇಗೌಡ, ನಜೀರ್, ಜಿಯಾರ ನಾಗನಾಯಕ , ರಂಗೇಗೌಡ, ಎಡತೊರೆ ಮಹೇಶ್, ಕುಮಾರ, ಎಲೆಹುಂಡಿ ವೆಂಕಟೇಗೌಡ, ತಾಲ್ಲೂಕು ಮಡಿವಾಳ ಸಂಘದ ಅಧ್ಯಕ್ಷ ಮಹೇಶ್ವರ್, ನಾಯಕ ಸಮುದಾಯದ ಮುಖಂಡ ಮಂಚನಾಯಕ ಮತ್ತಿತರರು ಪರಿಸ್ಥಿತಿ ತಿಳಿಗೊಳಿಸಿದರು.

ಮುಂದಿನ ದಿನಗಳಲ್ಲಿ ಬೇರೆ ಕಾರ್ಮಿಕರನ್ನು ಕರೆಸುವುದಿಲ್ಲ ಹಾಗೂ ಕಾರ್ಮಿಕರಿಗೆ ಯಾವುದೇ ಕಿರುಕುಳ ನೀಡುವುದಿಲ್ಲ ಎಂದು ಅಧೀಕ್ಷಕರು ತಿಳಿಸಿದ ಬಳಿಕ ಪ್ರತಿಭಟನೆ ಕೈಬಿಡಲಾಯಿತು. ಪ್ರತಿಭಟನೆಯಲ್ಲಿ ಲೇಬರ್ ಕಂಟ್ರಾಕ್ಟರ್ ನಾಗೇಶ್, ಕುಮಾರ್, ಕಾರ್ಮಿಕ ಮುಖಂಡರಾದ ಸಿದ್ದಶೆಟ್ಟಿ, ಪುಟ್ಟನಾಯಕ, ಚಂದ್ರೇಗೌಡ, ಕೃಷ್ಣ, ಎಚ್.ಬಿ.ನಾಗರಾಜು ಮತ್ತಿತರರು ಭಾಗವಹಿಸಿದ್ದರು.

ಇಂದು ಬೈಲಕುಪ್ಪೆ, ನಾಳೆ ಕೋಮಲಾಪುರದಲ್ಲಿ ಜಮಾಬಂದಿ ಕಾರ್ಯಕ್ರಮ

ಬೈಲಕುಪ್ಪೆ,ಸೆ.೧೨– ಸೆ.೧೩ರಂದು ಬೈಲಕುಪ್ಪೆಯಲ್ಲಿ ಹಾಗೂ ಸೆ.೧೪ರಂದು ಬೆಳಿಗ್ಗೆ ೧೧ಕ್ಕೆ ಕೋಮಲಾಪುರ ಗ್ರಾಮ ಪಂಚಾಯಿತಿ ಆವರಣದಲ್ಲಿ ೨೦೧೬–೧೭ನೇ ಸಾಲಿನ ಜಮಾಬಂದಿ ಕಾರ್ಯಕ್ರಮವು ಗ್ರಾಪಂ ಅಧ್ಯಕ್ಷೆ ಮಂಜುಳಾಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಜಮಾಬಂದಿ ನೋಡಲ್ ಅಧಿಕಾರಿ ಡಾ.ಚಾಮರಾಜು ಭಾಗವಹಿಸಿ ಮಾಹಿತಿ ನೀಡಲಿದ್ದಾರೆ.

ಈ ಸಭೆಗೆ ಸ್ಥಳೀಯ ಜಿಪಂ., ತಾಪಂ., ಗ್ರಾಪಂ. ಸದಸ್ಯರುಗಳು, ತಾಲ್ಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಜರಾಗಲಿದ್ದು, ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ದೇವರಾಜೇಗೌಡ ತಿಳಿಸಿದ್ದಾರೆ.

ಮೈಸೂರಿನ ಚಿತ್ರಮಂದಿರಗಳಲ್ಲಿ

ಚಿತ್ರಮಂದಿರ	ದೂರವಾಣಿ ಸಂ.	ಚಿತ್ರ	ಆಟ
ತಿಬ್ಬಾದೇವಿ	೨೫೫೨೯೫೮	ನೆರುಪ್ಪು ಡಾ	೪ ಆಟ
ವುಡ್‌ಲ್ಯಾಂಡ್ಸ್	೨೪೨೨೮೭೧	ಮುಗುಳು ನಗೆ	೪ ಆಟ
ಗಾಯತ್ರಿ	೨೪೪೩೫೬೮	ಆಪರೇಷನ್ ಅಲಮೇಲಮ್ಮ	೪ ಆಟ
ಪ್ರಭಾ	೨೪೨೩೫೬೯	ಹ್ಯಾಪಿಜರ್ನಿ	೪ ಆಟ
ಪದ್ಮ	೨೫೨೧೯೨೩	ನೆರುಪ್ಪು ಡಾ	೪ ಆಟ
ಸರಸ್ವತಿ	೨೫೪೧೪೫೧	ಮುಗುಳುನಗೆ	೪ ಆಟ
ಲಕ್ಷ್ಮಿ	೨೪೪೩೫೮೪	ರಾಜಹಂಸ	೪ ಆಟ
ಒಲಂಪಿಯಾ	೨೪೨೦೭೩೭	ದರ್ಪಣ	೪ ಆಟ
ಲಿಡೋ	೨೪೨೦೮೮೫	ಸಾಹೇಬ	೪ ಆಟ
ಸ್ಟೈಲಿನ್	೨೪೮೧೧೭೦	ಕಾಫಿತೋಟ	೪ ಆಟ
ಸ್ಟರ್ಲಿಂಗ್	೨೪೮೧೧೭೦	ಅರ್ಜುನ್ ರೆಡ್ಡಿ	೪ ಆಟ
ಸಂಗಂ	೨೫೨೦೪೯೪	ಯುದ್ಧಂ ಶರಣಂ (ತೆಲಗು)	೪ ಆಟ
ಶ್ರೀನಾಗರಾಜ್	೨೫೨೦೪೯೦	ಬಾದ್‌ಶಾ ಹೋ	೨ ಆಟ
ಶಾಂತಲ	೨೪೨೭೫೮೪	ಮುಗುಳು ನಗೆ	೪ ಆಟ
ಬಾಲಾಜಿ	೨೪೯೭೧೯೯	ಡ್ಯಾಡಿ	೪ ಆಟ
ರಾಜ್‌ಕಮಲ್	೨೪೨೩೫೫೪	ಐ.ಟಿ	೪ ಆಟ
ಮಹದೇಶ್ವರ	೯೦೦೮೨೦೯೬೩	ವಿವೇಗಂ (ತಮಿಳು)	೪ ಆಟ
ಶ್ರೀಮಾರುತಿ	೯೮೦೩೫೧೧೯೨	ಎಚ್ (ಕನ್ನಡ)	೪ ಆಟ

ಸ್ಕ್ರೀನ್ ೧: ಬೆ.೧೦.೦೦ ಅರ್ಜುನ್ ರೆಡ್ಡಿ, ಮ.೩.೧೫ಕ್ಕೆ ದ ನಟ್ ಜಾಬ್ ೨ ನುಟ್ಟಿ ನೇಚರ್, ಮ.೫.೦೦ಕ್ಕೆ ಐ.ಟಿ, ಸಂ.೭.೩೦ಕ್ಕೆ ಐ.ಟಿ, ರಾ.೯.೫ಕ್ಕೆ ಐ.ಟಿ **ಸ್ಕ್ರೀನ್ ೨:** ಬೆ.೧೧.೦೦ಕ್ಕೆ ಮುಗುಳುನಗೆ, ೧.೪೫ಕ್ಕೆ ರಾಜಹಂಸ, ಮ.೪.೩೦ಕ್ಕೆ ಕದಾನಾಯಗನ್, ಸಂ. ೭.೧೫ಕ್ಕೆ ಮೆಡ ಮೀಡ ಅಬ್ಬಾಯಿ, ಸಂ.೯.೪೫ ಕ್ಕೆ ಅರ್ಜುನ್ ರೆಡ್ಡಿ, **ಸ್ಕ್ರೀನ್ ೩:** ಬೆ೧೦.೩೦ಕ್ಕೆ ಐ.ಟಿ, ೧.೦೦ಕ್ಕೆ ಕಾಫಿತೋಟ ಸಂ.೩.೨೦ಕ್ಕೆ ಅಯಾನ್, ಸಂ.೫.೪೫ಕ್ಕೆ ದ ನಟ್ ಜಾಬ್ ೨ ನುಟ್ಟಿ ಬೈ ನೇಚರ್, ರಾ.೭.೩೦ಕ್ಕೆ ಸುಭ ಮಂಗಳ ಸಾವಧನ್, ರಾ.೯.೫೫ಕ್ಕೆ ಪೋಸ್ಟರ್ ಬಾಯ್ಸ್ **್ ೪:** ಬೆ.೧೦.೫೦ಕ್ಕೆ , ಪೋಸ್ಟರ್ ಬಾಯ್ಸ್, ಮ.೧.೧೫ ಮುಗುಳು ನಗೆ, ಮ.೪.೧೦ಕ್ಕೆ ಮುಗುಳು ನಗೆ, ಸ.೭.೦೦ ಕ್ಕೆ ಮುಗುಳು ನಗೆ, ೯.೫೫ಕ್ಕೆ ಯುದ್ಧಂ ಶರಣಂ

ಸ್ಕ್ರೀನ್ ೧: ಬೆ.೧೦.೩೦ಕ್ಕೆ ಐಟಿ, ಮ.೧.೨೦ಕ್ಕೆ ಐಟಿ, ಮ.೪.೧೦ಕ್ಕೆ ನೆರುಪ್ಪುಡ, ಸ.೭.೦೦ಕ್ಕೆ ಐಟಿ, ರಾ. ೯.೫೦ಕ್ಕೆ ಐಟಿ

ಸ್ಕ್ರೀನ್ ೨: ಬೆ.೧೦.೦೦ಕ್ಕೆ ಮುಗುಳು ನಗೆ, ಮ.೧.೦೦ಕ್ಕೆ ರಾಜಹಂಸ, ಮ.೩.೫೫ಕ್ಕೆ ಮುಗುಳು ನಗೆ, ಸಂ.೬.೫೫ಕ್ಕೆ ಮುಗುಳು ನಗೆ, ರಾ.೯.೫೫ಕ್ಕೆ ಪೋಸ್ಟರ್ ಬಾಯ್ಸ್

ಸ್ಕ್ರೀನ್ ೩ ಬೆ.೧೦.೨೫ಕ್ಕೆ ಪೋಸ್ಟರ್ ಬಾಯ್ಸ್, ಮ.೧.೦೫ಕ್ಕೆ ದರ್ಪಣ, ಮ.೪.೨೦ಕ್ಕೆ ಪೋಸ್ಟರ್ ಬಾಯ್ಸ್, ರಾ.೭.೦೦ಕ್ಕೆ ಡ್ಯಾಡಿ, ಸಂ. ೯.೪೫ಕ್ಕೆ ಕದಾನಾಯಗನ್,

ಸ್ಕ್ರೀನ್ ೪: ಬೆ.೧೦.೪೦ಕ್ಕೆ ಡ್ಯಾಡಿ, ಮ.೧.೨೫ ಕ್ಕೆ ಯುದ್ಧಂ ಶರಣಂ, ಸ.೪.೨೦ಕ್ಕೆ ಅಯಾನ ರಾ.೭.೦೦ಕ್ಕೆ ಹಳ್ಳಿ ಸೊಗಡು, ರಾ.೯.೪೦ಕ್ಕೆ ಯುದ್ಧ ಶರಣಂ

ಪ್ರತಿಭಾ ಕಾರಂಜಿಯಲ್ಲಿ ಮಿಂಚಿದ ಮಕ್ಕಳು

ಪ್ರತಿಭೆಗಳ ಅನಾವರಣಕ್ಕೆ ಮಂತ್ರಮುಗ್ಧರಾದ ಪೋಷಕರು, ಸಭಿಕರು

ಮೈಸೂರು,ಸೆ.೧೨– ಜಿಲ್ಲೆಯ ವಿವಿಧೆಡೆ ಪ್ರತಿಭಾ ಕಾರಂಜಿ ಕಾರ್ಯಕ್ರಮಗಳು ನಡೆಯುತ್ತಿದ್ದು, ಮಕ್ಕಳ ಪ್ರತಿಭೆಯ ಅನಾವರಣ ಕಂಡು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಕ್ಕಳ ಪೋಷಕರು, ಶಿಕ್ಷಕರು ಸೇರಿದಂತೆ ಸಭಿಕರು ಮಂತ್ರಮುಗ್ಧರಾದರು.

ಹುಣಸೂರು: ಕಲಿಕೆಯ ಜೊತೆಗೆ ಕಲೆಯನ್ನು ಮೈಗೂಡಿಸಿಕೊಳ್ಳಿ ಎಂದು ಶಾಸಕ ಎಚ್.ಪಿ.ಮಂಜುನಾಥ್ ಕರೆ ನೀಡಿದರು.

ನಗರದ ಶಿಕ್ಷಕರ ಭವನದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಕ್ಷೇತ್ರ ಸಮನ್ವಯ ಅಧಿಕಾರಿಗಳ ಸಹಯೋಗದೊಂದಿಗೆ ಏರ್ಪಡಿಸಲಾಗಿದ್ದ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಸುಮಾರು ೨ ಸಾವಿರ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಂಠಪಾಠ, ಜಾನಪದ ಗೀತೆ, ಭಕ್ತಿ ಗೀತೆ, ಏಕಪಾತ್ರಾಭಿನಯ, ಚಿತ್ರಕಲೆ, ಮಣ್ಣಿನ ಮಾದರಿ ತಯಾರಿಕೆ, ಭಾಷಣ, ಚರ್ಚಾಸ್ಪರ್ಧೆ, ಭರತನಾಟ್ಯ, ಕವಾಲಿ, ಗಜಲ್, ನಾಟಕ, ಜಾನಪದ ನೃತ್ಯ, ಕೋಲಾಟ ಹೀಗೆ ೨೫ ವಿವಿಧ ಸ್ಪರ್ಧೆಗಳಲ್ಲಿ ಮಕ್ಕಳು ಮಿಂಚಿದರು.

ತಾಲ್ಲೂಕು ಮಟ್ಟದಲ್ಲಿ ಆಯ್ಕೆಯಾದ ಮೊದಲ ಹಂತದ ಮಕ್ಕಳನ್ನು ಜಿಲ್ಲಾ ಮಟ್ಟಕ್ಕೆ ಕಳುಹಿಸಲಾಗುವುದು. ಸೆ. ೧೫ ಹಾಗೂ ೧೬ರಂದು ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ನಡೆಯುವ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಗೆ ಕಳುಹಿಸಲಾಗುವುದು ಎಂದು ಆಯೋಜಕರು ತಿಳಿಸಿದರು.

ಉದ್ಘಾಟನಾ ಕಾರ್ಯಕ್ರಮದಲ್ಲಿ ಜಿಪಂ ಸದಸ್ಯರಾದ ಸಾವಿತ್ರಮ್ಮ ಮಂಜು, ಜಯಲಕ್ಷ್ಮಿ ರಾಜಣ್ಣ, ಗೌರಮ್ಮ ಸೋಮಶೇಖರ್, ತಾಪಂ ಉಪಾಧ್ಯಕ್ಷ ಪ್ರೇಮ್‌ಕುಮಾರ್, ಬಿಇಓ ರೇವಣ್ಣ, ಚನ್ನವೀರಪ್ಪ, ಸಂತೋಷ್, ಮೊಗ್ಗಣ್ಣ, ಕಾಂಗ್ರೆಸ್ ಮುಖಂಡ ಬಿಳಿಕೆರೆ ಬಸವರಾಜು, ಕಾಂತರಾಜು, ಮಹದೇವಯ್ಯ, ಬಾಲರಾಜು, ಸಿದ್ದರಾಜು, ಜೆ.ಮಹದೇವು, ಶಿಲ್ಪಾ, ಶಶಿಕುಮಾರ್, ಅನಂತ ಮೂರ್ತಿ, ನರಸಿಂಹರಾಜು, ಸ್ವಾಮಿ, ಕೌಶಲ್ಯ, ಗೋವಿಂದೇಗೌಡ ಮತ್ತಿತರರು ಭಾಗವಹಿಸಿದ್ದರು.

ಪಿರಿಯಾಪಟ್ಟಣ: ಪ್ರತಿಭಾ ಕಾರಂಜಿ ಕಾರ್ಯಕ್ರಮವು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಮೈಸೂರು ಡಯಟ್ ಪ್ರಾಂಶುಪಾಲ ರಘುನಂದನ್ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ವಿದ್ಯಾಸಂಸ್ಥೆಯ ಆವರಣದಲ್ಲಿ ಮಂಗಳವಾರ ಏರ್ಪಡಿಸಿದ್ದ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲಾ ಉತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಪುರಸಭೆ ಅಧ್ಯಕ್ಷ ವೇಣುಗೋಪಾಲ್ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಸರ್ಕಾರಿ ಶಿಕ್ಷಕರುಗಳಿಗೆ ಒತ್ತಡದ ವಾತಾವರಣ ನಿರ್ಮಾಣವಾಗಿದ್ದು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳೂ ಹೆಚ್ಚುತ್ತಿರುವುದು ಕಂಡುಬರುತ್ತಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಕರೀಗೌಡ, ತಾ.ಪಂ. ಸದಸ್ಯ ಟಿ.ಈರಯ್ಯ, ತಾಲ್ಲೂಕು ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ನಾಗಶೆಟ್ಟಿ, ಬಿಆರ್‌ಸಿ ಹೇಮಂತ ರಾಜ್ ಮಾತನಾಡಿದರು. ಈ ಸಂದರ್ಭದಲ್ಲಿ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ದೇವರಾಜೇಗೌಡ, ಕಾರ್ಯದರ್ಶಿ ಗಣೇಶ್ ಕುಮಾರ್, ಮುಖ್ಯ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಪಿ.ನಾಗರಾಜು, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಕೆ.ಪ್ರಕಾಶ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಶಿವರಾಜ್, ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಸಿ.ಪುಟ್ಟರಾಜು, ಶಿಕ್ಷಕರುಗಳಾದ ಯೋಗರಾಜ್, ವಸಂತಶೇಖರ್, ಗುರುದತ್ ಮತ್ತಿತರರು ಹಾಜರಿದ್ದರು.

ರಾವಂದೂರು: ಗ್ರಾಮೀಣ ಮಕ್ಕಳಲ್ಲಿ ಅಡಗಿರುವಂತಹ ಪ್ರತಿಭೆಯನ್ನು ಹೊರಸೂಸುವಲ್ಲಿ ಪ್ರತಿಭಾಕಾರಂಜಿಯಂತಹ ಕಾರ್ಯಕ್ರಮಗಳು ಉತ್ತಮ ವೇದಿಕೆಯಾಗಿದೆ ಎಂದು ಸಿಆರ್‌ಪಿ ಮಂಜುನಾಥ್ ಅಭಿಮತ ವ್ಯಕ್ತಪಡಿಸಿದರು.

ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರು ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಏರ್ಪಡಿಸಿದ್ದ ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಕರು, ಪೋಷಕರು ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಮಕ್ಕಳ ಉನ್ನತ ಭವಿಷ್ಯಕ್ಕೆ ಸಹಕಾರಿಯಾಗಬೇಕೆಂದು ಅವರು ಸಲಹೆ ನೀಡಿದರು.

ಮುಖ್ಯ ಶಿಕ್ಷಕಿ ಲಿಲ್ಲಿಮೇರಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಜೆ.ಕುಮಾರ್, ಶಿಕ್ಷಕರಾದ ಕೃಷ್ಣಮೂರ್ತಿ, ಲೋಕೇಶ್, ರಾಜು, ಹುಸ್ಸಾದ್, ಹೇಮ್, ಮಂಜು, ಶ್ರೀಕಂಠಪ್ಪ, ಬ್ರಗೇಶ್, ಈಶ್ವರ್, ರಾಮಸ್ವಾಮಿ ಮತ್ತಿತರರು ಹಾಜರಿದ್ದರು.

ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ 2017-18

ಹುಣಸೂರಿನಲ್ಲಿ ಆಯೋಜಿಸಿದ್ದ ಪ್ರತಿಭಾ ಕಾರಂಜಿಯನ್ನು ಶಾಸಕ ಎಚ್.ಪಿ.ಮಂಜುನಾಥ್ ಮಕ್ಕಳೊಂದಿಗೆ ಉದ್ಘಾಟಿಸಿದರು.

ಪಿರಿಯಾಪಟ್ಟಣದಲ್ಲಿ ನಡೆದ ಪ್ರತಿಭಾ ಕಾರಂಜಿಯಲ್ಲಿ ನೃತ್ಯ ಪ್ರದರ್ಶನ ನೀಡಿದ ಶಾಲಾ ಮಕ್ಕಳು.

> ಗ್ರಾಮೀಣ ಪ್ರದೇಶದ ಮಕ್ಕಳು ದೈಹಿಕವಾಗಿ ಸಮರ್ಥರಾಗಿರುವುದರ ಜೊತೆಗೆ ಭೌತಿಕವಾಗಿಯೂ ಉತ್ತಮರಾಗಿದ್ದು ಯಾವುದೇ ಸಂದರ್ಭದಲ್ಲಿಯೂ ಮಕ್ಕಳ ಪ್ರತಿಭೆಯನ್ನು ಹತ್ತಿಕ್ಕುವ ಕೆಲಸಗಳು ಶಿಕ್ಷಕರಿಂದ ಆಗಬಾರದು.
>
> -**ಆರ್.ಕರೀಗೌಡ,**
> ಕ್ಷೇತ್ರ ಶಿಕ್ಷಣಾಧಿಕಾರಿ, ಹುಣಸೂರು.